## <u>ಅಸಲು ದಾವಾ ಸಂಖ್ಯೆ:- **101/2021**</u> ಪಿ.ಡಬ್ಲ್ಯೂ:- **1**

ದಿನಾಂಕಃ 21-06-2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ದಾವಾ ಆಸ್ತಿಯ ನಂಬರ್ ಮತ್ತು ವಿಸ್ತೀರ್ಣ ಗೊತ್ತು ಆದರೆ ಚಕ್ಕುಬಂಧಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಯಾವ ಊರಿನಲ್ಲಿ ಇದೆ ಎಂದು ನನಗೆ ನೆನಪಿಲ್ಲ. ನಿಪಿ-7 ಕ್ರಯದ ಕರಾರು ಪತ್ರವನ್ನು ನಮಗೆ ಯಾರು ತೆಗೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-7 ಕ್ರಯದ ಕರಾರು ಪತ್ರ ಯಾರ ಯಾರ ನಡುವೆ ಮತ್ತು ಯಾವ ಆಸ್ತಿಗೆ ಸಂಬಂಧಪಟ್ಟಂತೆ ಆಗಿದೆ ಎಂಬ ವಿಚಾರ ನನಗೆ ಗೊತ್ತಿಲ್ಲ. ನಿಪಿ-4 ರಿಂದ 6 ಶಾಲಾ ದಾಖಲಾತಿಗಳನ್ನು ಈ ದಾವೆಗೋಸ್ಕರ ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-4 ರಿಂದ 6 ಶಾಲಾ ದಾಖಲಾತಿಗಳನ್ನು ನಾನೇ ಶಾಲೆಯಿಂದ ಪಡೆದುಕೊಂಡು ಬಂದಿರುತ್ತೇನೆ. 1 ನೇ ಪ್ರತಿವಾದಿಯ ತಾಯಿ ಲಕ್ಷ್ಮಮ್ಮ ಅನಾರೋಗ್ಯದಿಂದ ತೀರಿಕೊಂಡಿರುತ್ತಾರೆ. ಲಕ್ಷ್ಮಮ್ಮರವರಿಗೆ ಕೊನೆಕಾಲದಲ್ಲಿ ಕೆಮ್ಮು, ಜ್ವರ ಮತ್ತು ಹೊಟ್ಟೆ ನೋವಿನಿಂದ ಬಳಲುತ್ತಿದ್ದರು ಮತ್ತು ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡಿದ್ದರು. ಲಕ್ಷ್ಮಮ್ಮರವರು 1 ನೇ ಪ್ರತಿವಾದಿಯ ಮನೆಯಲ್ಲಿ ತೀರಿಕೊಂಡಿರುತ್ತಾರೆ. ಲಕ್ಷ್ಮಮ್ಮರವರಿಗೆ ಕೊನೆ ಕಾಲದಲ್ಲಿ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮಮ್ಮರವರ ಕೊನೆ ಕಾಲದಲ್ಲಿ ಅವರ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ಮತ್ತು ಅವರು ತೀರಿಕೊಂಡ ನಂತರ ಶವ ಸಂಸ್ಕಾರದ ವಿಧಿವಿಧಾನಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಖರ್ಚು ವೆಚ್ಚಗಳನ್ನು 1 ನೇ ಪ್ರತಿವಾದಿಯವರೇ ಮಾಡಿರುತ್ತಾರೆ ಎಂದರೆ ಸರಿ. ಈಗ ದಾವಾ ಆಸ್ತಿಯ ಸಾಗುವಳಿಯನ್ನು 2 ನೇ ಪ್ರತಿವಾದಿ ಮಾಡುತ್ತಿದ್ದಾರೆ. ದಾವಾ ಆಸ್ತಿಯು ಅರಣ್ಯ ಇಲಾಖೆಗೆ ಸೇರಿದ್ದು ಎಂದು ಅರಣ್ಯ ಇಲಾಖೆಗೆ ಮತ್ತು ಸಾಗುವಳಿದಾರರಿಗೆ ವಿವಾದ

ನಡೆಯುತ್ತಿದ್ದರಿಂದ ದಾವಾ ಆಸ್ತಿಯಲ್ಲಿ ಯಾರು ಸಾಗುವಳಿಯನ್ನು ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಳದಮ್ಮರವರ ಮಗ ಮಂಜುನಾಥ ಎಂಬುವವರು ಗೌ.ಹಿರಿಯ ಸಿವಿಲ್ ನ್ಯಾಯಾಲಯ ಹೊನ್ನಾಳಿಯಲ್ಲಿ ಅಸಲು ದಾವಾ ಸಂಖ್ಯೆ.35/2022 ರ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೂ ಮತ್ತು 1 ನೇ ಪ್ರತಿವಾದಿಯ ನಡುವೆ ಮಾತುಕತೆ ಇರುತ್ತದೆ. ದಾವಾ ಆಸ್ತಿಯು ಲಕ್ಷ್ಮಮ್ಮರವರ ಸ್ವಯಾರ್ಜಿತ ಆಸ್ತಿ ಆಗಿದ್ದರಿಂದ ಅವರು ಮರಣ ಶಾಸನದ ಮೂಲಕ ಪ್ರತಿವಾದಿ 1 ಮತ್ತು 2 ರವರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಲಕ್ಷ್ಮಮ್ಮರವರ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಲಕ್ಷ್ಮಮ್ಮರವರು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಸಾಧ್ಯವಾದರೆ ದಾಖಲಾತಿಗಳನ್ನು ಹಾಜರುಪಡಿಸುತ್ತೇನೆ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದಿದ್ದರೂ ಸಹ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.